# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **253** |
| ಸದಸ್ಯರ ಹೆಸರು | : | **ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸುವ ದಿನಾಂಕ | : | **10-12-2024** |
| ಉತ್ತರಿಸುವ ಸಚಿವರು | : | **ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.** |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; ಕೆಲವು ಕೈಗಾರಿಕೆಗಳು ದಾಖಲೆಗಳಲ್ಲಿ ಮಾತ್ರ ಇದ್ದು ಇವುಗಳ ಗಣತಿ (ಸೆನ್ಸಸ್) ಮಾಡಿ ನಿಜವಾಗಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳ ಸಂಖ್ಯೆಯನ್ನು ಖಚಿತಪಡಿಸಿಕೊಳ್ಳಲಾಗಿದೆಯೇ; | ಜುಲೈ 2020 ರಿಂದ ಎಂ.ಎಸ್.ಎಂ.ಇ ಉದ್ಯಮಗಳ ನೊಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ನೊಂದಣಿ ಮಾಡಲಾಗುತ್ತಿದ್ದು, ಸದರಿ ತಂತ್ರಾಂಶದಲ್ಲಿರುವಂತೆ ನವೆಂಬರ್ 2024ರ ಅಂತ್ಯಕ್ಕೆ ಒಟ್ಟು 17,44,655 ಕೈಗಾರಿಕೆಗಳು ನೋಂದಣಿಯಾಗಿರುತ್ತವೆ ಅವುಗಳ ಪೈಕಿ 17,05,826 ಸೂಕ್ಷ್ಮ ಕೈಗಾರಿಕೆಗಳು, 35,888 ಸಣ್ಣ ಕೈಗಾರಿಕೆಗಳು ಹಾಗೂ 2941 ಮಧ್ಯಮ ಕೈಗಾರಿಕೆಗಳಾಗಿರುತ್ತವೆ.<br>ಸದರಿ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ಗಣತಿಯನ್ನು ಕೈಗೊಂಡಿರುವುದಿಲ್ಲ. |
| (ಆ) | ರಾಜ್ಯದಲ್ಲಿ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರಕಾರ ಯಾವ ರೀತಿ ಪ್ರೋತ್ಸಾಹ ನೀಡುತ್ತಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೊಸದಾಗಿ ಸ್ಥಾಪಿಸಿರುವ ಕೈಗಾರಿಕೆಗಳೆಷ್ಟು; ಇವುಗಳಿಗೆ ನೀಡಿರುವ ಸಹಾಯಧನವೆಷ್ಟು; (ವಿವರ ನೀಡುವುದು) | ರಾಜ್ಯದಲ್ಲಿ ಸ್ಥಾಪಿತವಾಗುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಕೈಗಾರಿಕಾ ನೀತಿ 2020-25ರ ರನ್ವಯ ನೀಡಲಾಗುತ್ತಿರುವ ಪ್ರೋತ್ಸಾಹ ಮತ್ತು ರಿಯಾಯಿತಿಗಳ ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 6500 ಘಟಕಗಳು ಸ್ಥಾಪಿತವಾಗಿರುತ್ತವೆ. ಮತ್ತು ಕಳೆದ ಮೂರು ವರ್ಷಗಳಲ್ಲಿ ಕೈಗಾರಿಕಾ ಇಲಾಖೆಗಳಿಂದ 63 ಕೈಗಾರಿಕೆ ಘಟಕಗಳಿಗೆ ರೂ. 13.43 ಕೋಟಿ ಸಹಾಯಧನ ಮಂಜೂರು ಆಗಿರುತ್ತದೆ.<br><br>ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ 2151 ಹೊಸ ಘಟಕಗಳು ಸ್ಥಾಪಿತವಾಗಿರುತ್ತವೆ ಮತ್ತು ಕಳೆದ ಮೂರು ವರ್ಷಗಳಲ್ಲಿ 50 ಕೈಗಾರಿಕೆ ಘಟಕಗಳಿಗೆ ಕೈಗಾರಿಕಾ ನೀತಿಗಳಡಿ ರೂ:31.72 ಕೋಟಿ ಸಹಾಯಧನ ಮಂಜೂರು ಆಗಿರುತ್ತದೆ. |
| (ಇ) | ಕುಶಲಕರ್ಮಿಗಳಿಗೆ ವಿಶೇಷ ಗೃಹ ನಿರ್ಮಾಣ ಯೋಜನೆಯಡಿ ನಿರ್ಮಿಸಲಾಗುವ ವಸತಿ ಕಾರ್ಯಾಗಾರಗಳ ಅರ್ಹತಾ ಮಾನದಂಡಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆದಾಯ ಮಿತಿ ವಾರ್ಷಿಕ ರೂ.30,000 ಕ್ಕಿಂತ ಕಡಿಮೆ ಇರಬೇಕಾಗಿದ್ದು, ಹೂಡಬೇಕಾದ ಮೂಲ ಬಂಡವಾಳ ರೂ. 30,000 ರೂಪಾಯಿಗಳಿದ್ದು ಈ ವರಮಾನದವರು ಮೂಲ ಬಂಡವಾಳವನ್ನು ಹೊಂದಿಸುವುದು ಹೇಗೆ; ಇಂತಹ ಸೂಕ್ತವಲ್ಲದ ನಿಯಮಗಳನ್ನು ಮಾರ್ಪಾಡಿಸಲು ಸರ್ಕಾರ ಯಾವಾಗ ಕ್ರಮವಹಿಸುವುದು. | ಕುಶಲಕರ್ಮಿಗಳು ಸೇರಿದಂತೆ ವಸತಿ ರಹಿತರಿಗೆ ವಸತಿ ಇಲಾಖೆಯು ವಿವಿಧ ಯೋಜನೆಗಳಡಿ ವಸತಿ ಹಂಚಿಕೆ ಮಾಡುತ್ತಿರುವುದರಿಂದ, ಕೈಗಾರಿಕೆ & ವಾಣಿಜ್ಯ ಇಲಾಖೆಗೆ ವಸತಿ ಕಾರ್ಯಾಗಾರ ಯೋಜನೆಗೆ ಯಾವುದೇ ಅನುದಾನ ಹಂಚಿಕೆ ಮಾಡಿರುವುದಿಲ್ಲ.<br><br>ಪ್ರಸ್ತುತ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಯೋಜನೆಗಳಡಿ ಆಯ್ಕೆ ಆಗುವ ಫಲಾನುಭವಿಗಳ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದಲ್ಲಿ ರೂ.1.20 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ರೂ.2.00 ಲಕ್ಷ ನಿಗಧಿಪಡಿಸಲಾಗಿರುತ್ತದೆ. |
| (ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಲವು ಪಾರಂಪರಿಕ ಮತ್ತು ಕುಲಕಸುಬು ಹೊಂದಿರುವ ಹಲವು ಸಮುದಾಯಗಳಿದ್ದು, ಅವರಿಗೆ ಗೃಹ ಕೈಗಾರಿಕೆ ಸ್ಥಾಪಿಸಲು ಮತ್ತು | **ಪಿ.ಎಂ-ವಿಶ್ವಕರ್ಮ - PM-Vishwakarma** ಯೋಜನೆಯು **ಕೇಂದ್ರ ವಲಯದ ಯೋಜನೆಯಾಗಿ – Central Sector Scheme (CSS)**, ಭಾರತ ಸರ್ಕಾರದ 2023-24ನೇ ಸಾಲಿನ ಆಯವ್ಯಯದಲ್ಲಿ |

| | | |
|---|---|---|
| | ಮುಂದುವರಿಸಲು ಅಗತ್ಯವಿರುವ ಕಟ್ಟಡ, ವಿದ್ಯುತ್, ವಿವಿಧ ನಿರಾಪೇಕ್ಷಣ ಪತ್ರಗಳು, ಮೂಲ ಬಂಡವಾಳ, ಸಾಲ ಸಹಾಯಧನ ಇತ್ಯಾದಿಗಳನ್ನು ಒದಗಿಸುವಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಘೋಷಿಸಲಾಗಿರುತ್ತದೆ.<br><br>ಈ ಯೋಜನೆಯ ಮುಖ್ಯಾಂಶಗಳು ಈ ಕೆಳಕಂಡಂತಿವೆ:<br><br>**ಪಿ.ಎಂ-ವಿಶ್ವಕರ್ಮ - PM-Vishwakarma** ಯೋಜನೆಯ ಮಾರ್ಗಸೂಚಿಯಲ್ಲಿ ಕುಶಲಕರ್ಮಿಗಳಿಗೆ ಪ್ರಾರಂಭದಿಂದ ಕೊನೆಯವರೆಗೆ ಸಮಗ್ರವಾದ ಬೆಂಬಲವನ್ನು ನೀಡಿ, ಉತ್ಪನ್ನಗಳ ಗುಣಮಟ್ಟವನ್ನು ಸುಧಾರಿಸಿ, ಮೌಲ್ಯವನ್ನು ಹೆಚ್ಚಿಸುವ ಹಾಗೂ ಅವರನ್ನು ಸಕ್ರಿಯಗೊಳಿಸಿ, ವೃತ್ತಿಗಳನ್ನು ಅಭ್ಯಾಸ ಮಾಡುವ ವಿಧಾನಗಳನ್ನು ಉನ್ನತೀಕರಿಸಿ, ಕುಶಲಕರ್ಮಿಗಳ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಮತ್ತು ಅವರ ಜೀವನದ ಗುಣಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.<br><br>ಪಿ.ಎಂ-ವಿಶ್ವಕರ್ಮ ಯೋಜನೆ, ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನಾ ಯೋಜನೆ ಮತ್ತು ಕೈಗಾರಿಕಾ ನೀತಿಗಳಡಿ ಸಾಲ ಸಹಾಯಧನ ಮಂಜೂರು ಮಾಡಲಾಗುತ್ತಿದೆ. ಕೈಗಾರಿಕಾ ನೀತಿ 2020-25 ಅನ್ವಯ ಸಹಾಯಧನವನ್ನು ಮತ್ತು ಕೈಗಾರಿಕಾ ಪ್ರದೇಶ / ಕೈಗಾರಿಕಾ ವಸಾಹತುಗಳಲ್ಲಿ ನಿವೇಶನ / ಶೆಡ್ಡುಗಳನ್ನು ಬೇಡಿಕೆ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ. |

**ಸಿಐ 129 ಎಸ್‌ಎಸ್‌ಐ 2024**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಅನುಬಂಧ-1

## ಆರ್ಥಿಕ ಉತ್ತೇಜನಗಳು

**ಕೋಷ್ಟಕ 9.1.1**

<table>
<tr><th>ಉತ್ತೇಜನದ ಮಾದರಿ</th><th>ಸಾಮಾನ್ಯ ಪ್ರವರ್ಗ</th><th>ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು.</th></tr>
<tr><td rowspan="2">ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ</td><td>ಸೂಕ್ಷ್ಮ ಕೈಗಾರಿಕೆಗಳು<br><br>ವಲಯ 1: ಐಎಫ್‌ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 2: ಐಎಫ್‌ಎಯ 25% (ಗರಿಷ್ಠ ರೂ.20ಲಕ್ಷ)<br>ವಲಯ 3: ಇಲ್ಲ<br><br>ಸಣ್ಣ ಕೈಗಾರಿಕೆಗಳು<br><br>ವಲಯ 1: ಐಎಫ್‌ಎಯ 25% (ಗರಿಷ್ಠ ರೂ.100ಲಕ್ಷ)<br>ವಲಯ 2: ಐಎಫ್‌ಎಯ 20% (ಗರಿಷ್ಠ ರೂ.90ಲಕ್ಷ)<br>ವಲಯ 3: ಇಲ್ಲ<br><br>ಐಎಫ್‌ಎ –ಸ್ಥಿರಾಸ್ತಿಯ ಮೌಲ್ಯ</td><td>ಸೂಕ್ಷ್ಮ ಕೈಗಾರಿಕೆಗಳು<br><br>ವಲಯ 1: ಐಎಫ್‌ಎಯ 35% (ಗರಿಷ್ಠ ರೂ.30ಲಕ್ಷ)<br>ವಲಯ 2: ಐಎಫ್‌ಎಯ 30% (ಗರಿಷ್ಠ ರೂ.25ಲಕ್ಷ)<br>ವಲಯ 3: ಐಎಫ್‌ಎನ 10% (ಗರಿಷ್ಠ ರೂ.10ಲಕ್ಷ)<br><br>ಸಣ್ಣ ಕೈಗಾರಿಕೆಗಳು<br><br>ವಲಯ 1: ಐಎಫ್‌ಎಯ 30% (ಗರಿಷ್ಠ ರೂ.105ಲಕ್ಷ)<br>ವಲಯ 2: ಐಎಫ್‌ಎಯ 25% (ಗರಿಷ್ಠ ರೂ.95ಲಕ್ಷ)<br>ವಲಯ 3: ಐಎಫ್‌ಎನ 10% (ಗರಿಷ್ಠ ರೂ.25ಲಕ್ಷ)<br><br>ವಲಯ 1 ಮತ್ತು 2 ರಲ್ಲಿ ಐಎಫ್‌ಎಯ 5% ಹೆಚ್ಚುವರಿ ಸಬ್ಸಿಡಿ ಗರಿಷ್ಠ ರೂ.5 ಲಕ್ಷ</td></tr>
<tr><td colspan="2">ಸೂಚನೆ:<br>ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇ.10 ರಷ್ಟು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪಡೆಯಬಹುದು ಮತ್ತು ಈ ಸಹಾಯಧನವನ್ನು ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ಗರಿಷ್ಠ 5 ಆರ್ಥಿಕ ವರ್ಷಗಳವರೆಗೆ ವಿಸ್ತರಿಸಬಹುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ಮೇಲ್ಕಾಣಿಸಿದ ಗರಿಷ್ಠ ಮಿತಿಗೆ ಒಳಪಟ್ಟಿರುತ್ತದೆ. ಈ ಹೂಡಿಕೆ ಉತ್ತೇಜನಾ ಸಬ್ಸಿಡಿಯ ಮಿತಿಯು ಅವಧಿ ಮುಗಿಯುವವರೆಗೆ (5ಆರ್ಥಿಕ ವರ್ಷಗಳವರೆಗೆ )ಅಥವಾ ಮಿತಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.</td></tr>
<tr><td>ಮಧ್ಯಮ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಬ್ಸಿಡಿ<br><br>ಮೊದಲ 10 ಕೋಟಿ ರೂಗಳಿಗೆ ಕನಿಷ್ಠ ಉದ್ಯೋಗಾವಕಾಶ ಸಂಖ್ಯೆ 20 ಮತ್ತು ಮುಂದಿನ ಹೆಚ್ಚುವರಿ ಪ್ರತೀ ರೂ.10 ಕೋಟಿಗೆ ಹೆಚ್ಚುವರಿ 7 ಉದ್ಯೋಗಾವಕಾಶ ಪ್ರಮಾಣಾನುಸಾರದಂತೆ</td><td colspan="2">ಮಧ್ಯಮ ಕೈಗಾರಿಕೆಗಳು<br><br><table><tr><th>ವಲಯ</th><th>[illegible]</th><th>ಗರಿಷ್ಠ ಅವಧಿ (ವರ್ಷ)</th><th>ಐಎಫ್‌ಎ ಮಿತಿ</th></tr><tr><td>1</td><td rowspan="2">2.50%</td><td>6</td><td>ಐಎಫ್‌ಎಯ 40 %</td></tr><tr><td>2</td><td>5</td><td>ಐಎಫ್‌ಎಯ 35 %</td></tr><tr><td>3</td><td colspan="3">ಇಲ್ಲ</td></tr></table><br>ಸೂಚನೆ:<br>ಮಧ್ಯಮ ಕೈಗಾರಿಕೆಗಳು ಹೂಡಿಕೆ ಉತ್ತೇಜನ ಸಬ್ಸಿಡಿಯನ್ನು ಪ್ರತೀ ಆರ್ಥಿಕ ವರ್ಷದಲ್ಲಿ ವಹಿವಾಟಿನ ಶೇಕಡಾವಾರು ಪಡೆಯಬಹುದಾಗಿದ್ದು ಮೇಲ್ಕಾಣಿಸಿದಂತೆ ವಾಣಿಜ್ಯ ಉತ್ಪಾದನೆ ಆರಂಭಿಸಿದ ಗರಿಷ್ಠ ಅವಧಿಗೆ ಅನ್ವಯವಾಗುವುದು. ಇಂತಹ ಸಂಚಿತ ಹೂಡಿಕೆ ಉತ್ತೇಜನಾ ಸಬ್ಸಿಡಿಯು ಐಎಫ್‌ಎ ಮಿತಿ ಅಥವಾ ಅವಧಿ ಮುಗಿಯುವವರೆಗೆ ಯಾವುದು ಮೊದಲೋ ಅಲ್ಲಿವರೆಗೆ ಅನ್ವಯವಾಗುತ್ತದೆ ಮತ್ತು ಇದನ್ನು ಮುಂದೂಡುವಂತಿಲ್ಲ.<br>ಕಡಿಮೆ ಉದ್ಯೋಗಾವಕಾಶ ಒದಗಿಸಲು ಬಯಸುವ ಮಧ್ಯಮ ಕೈಗಾರಿಕೆಗಳು/ಹೂಡಿಕೆಗೆ ತಕ್ಕಂತೆ ನಿಗದಿಪಡಿಸಿದ ಉದ್ಯೋಗಾವಕಾಶ ನೀಡಲು ಸಾಧ್ಯವಾಗದ ಕೈಗಾರಿಕೆಗಳಿಗೆ ಒಟ್ಟು ಒದಗಿಸಿದ ಉದ್ಯೋಗಾವಕಾಶಕ್ಕೆ ಅನುಗುಣವಾಗಿ ವಹಿವಾಟು ಶೇಕಡಾವಾರು ಪ್ರಮಾಣ ಕಡಿಮೆ ಆಗುವುದು. ಹೀಗಿದ್ದರೂ ಗರಿಷ್ಠ ಅವಧಿ ಮತ್ತು ಐಎಫ್‌ಎ ಮೇಲ್ಕಂಡಂತೆ ಇರಲಿದೆ.</td></tr>
<tr><td>ಎಂಎಸ್‌ಎಂಇಗಳಿಗೆ ಸ್ಟಾಂಪ್ ಶುಲ್ಕ(ಡ್ಯೂಟಿ) ವಿನಾಯಿತಿ</td><td colspan="2">ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:<br>ರಾಜ್ಯ ಹಣಕಾಸು ನಿಗಮ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್), ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ಸರ್ಕಾರ ಕಾಲಾನುಕ್ರಮವಾಗಿ ಹೊರಡಿಸುವ ಅಧಿಸೂಚನೆಗಳಿಗೆ ಅನುಗುಣವಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.<br><br>ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕಿಯಾನಿಕ್ಸ್, ಕೈಗಾರಿಕಾ ಸಹಕಾರ ಸಂಘಗಳು, ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು, ಆಹಾರ ಪಾರ್ಕ್‌ಗಳು, ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಬೇಕು.</td></tr>
</table>

| ಉತ್ತೇಜನದ ಮಾದರಿ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು,ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|---|
| | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್‌ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ | ವಲಯ1, ವಲಯ 2 : ರೂ.1000/–ಕ್ಕೆ ರೂ.1/–<br>ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/–ಕ್ಕೆ ರೂ.1/– |
| | ಸೂಚನೆ:<br>*1.* ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿಗಳು ಕೆಎಲ್‌ಆರ್ ಕಾಯ್ದೆ 1961ರ ಸೆಕ್ಷನ್ 109ರ ಅಡಿಯಲ್ಲಿ ಖರೀದಿಸಿದ ಭೂಮಿ, ಹಾಗೂ ಎಸ್‌ಎಲ್‌ಡಬ್ಲ್ಯುಸಿಸಿ/ಡಿಎಲ್‌ಡಬ್ಲ್ಯುಸಿಸಿ ಅನುಮೋದಿತ ಯೋಜನೆಗಳ ಕೈಗಾರಿಕಾ ಭೂಪರಿವರ್ತಿತ ಭೂಮಿಯ ನೇರ ಖರೀದಿಗೂ ಅನ್ವಯವಾಗುವುದು. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವಾಗಿ ಕೆಐಎಡಿಬಿ ಭೂ ಮಾಲೀಕರಿಗೆ ನೀಡುವ ಭೂಮಿಗೂ ಈ ರಿಯಾಯಿತಿ/ವಿನಾಯಿತಿ ನೀಡಲಾಗುವುದು.<br>*2.* ಭೂಮಿ,ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್‌ಗಳಿಗೆಭೋಗ್ಯದ ಅವಧಿ ಮುಗಿದ ಬಳಿಕ ಅಂತಿಮ ಕ್ರಯ ಪತ್ರ (ಸೇಲ್ ಡೀಡ್)ದ ನೋಂದಣಿಗೂ ಕೈಗಾರಿಕಾ ನೀತಿಯಲ್ಲಿ ನಮೂದಿಸಿರುವಂತೆ ಭೋಗ್ಯ ಮತ್ತು ಕ್ರಯಪತ್ರ (ಲೀಸ್ ಕಮ್ ಸೇಲ್ ಡೀಡ್) ಮಾಡುವ ವೇಳೆ ಚಾಲ್ತಿಯಲ್ಲಿದ್ದ ಪ್ರಕಾರ ಸ್ಟಾಂಪ್ ಶುಲ್ಕ ವಿನಾಯ್ತಿ ಮತ್ತು ನೋಂದಣಿ ಶುಲ್ಕಗಳಲ್ಲಿ ರಿಯಾಯ್ತಿ ಲಭ್ಯವಾಗುವುದು. | |
| ಎಂಎಸ್‌ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ | ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| ಎಂಎಸ್‌ಎಂಇಗಳಿಗೆ ವಿದ್ಯುತ್‌ಶುಲ್ಕದ ಮೇಲಿನ ತೆರಿಗೆ ವಿನಾಯಿತಿ | ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಶಕ್ತಿ ಸಬ್ಸಿಡಿ | **ವಲಯ 1 ಮತ್ತು 2ಕ್ಕೆ ಮಾತ್ರ:** ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/–ರಂತೆ 3 ವರ್ಷಗಳ ಅವಧಿವರೆಗೆ ವಿದ್ಯುತ್‌ಶಕ್ತಿ ಸಬ್ಸಿಡಿ. | |
| ಕುಶಲಕರ್ಮಿಗಳಿಗೆ ಬೆಂಬಲ | 1. ಕುಶಲಕರ್ಮಿಗಳಿಗೆ ಶೇ. 4% ಬಡ್ಡಿದರದಲ್ಲಿ ಅವಧಿ ಸಾಲ(ಟರ್ಮ್ ಲೋನ್) ಮತ್ತು ದುಡಿಮೆ ಬಂಡವಾಳ ಸಾಲ.<br>2. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ. 10%ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ)<br>3. ಕರಕುಶಲ ಸಂಘಟನೆಗಳಿಗೆ, ಕರಕುಶಲ ಕಾಂಪ್ಲೆಕ್ಸ್‌ಗಳಿಗೆ,ಸಮೂಹ ಮೊದಲಾದವುಗಳಿಗೆ ಯಂತ್ರೋಪಕರಣಗಳು,ಬಿಡಿ ಭಾಗಗಳಿಗೆ 75% ಅನುದಾನ | |

## ಕೋಷ್ಟಕ 9.1.2

| [illegible] | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ | ವಲಯ1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ–ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ | ವಲಯ 1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ–ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್‌ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ |
| ತಂತ್ರಜ್ಞಾನ ಅಳವಡಿಕೆ | **ಎಲ್ಲಾ ವಲಯಗಳಿಗೆ**<br>ವೆಚ್ಚದ 25% (ಗರಿಷ್ಠ ರೂ.50,000/–) ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ | **ಎಲ್ಲಾ ವಲಯಗಳಿಗೆ**<br>ವೆಚ್ಚದ 50% (ಗರಿಷ್ಠ ರೂ.1 ಲಕ್ಷ )ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ . |

| ಎಂಎಸ್‌ಎಂಇಗಳಿಗೆ ತಂತ್ರಜ್ಞಾನ ಅಳವಡಿಕೆ ಮತ್ತು ಉನ್ನತೀಕರಣ | | |
|---|---|---|
| | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ತಂತ್ರಜ್ಞಾನ ವ್ಯವಹಾರ ವಿಕಸನ ಕೇಂದ್ರ (ಟಿಬಿಐಸಿ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠ ರೂ.50.00 ಲಕ್ಷ) (ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) | ಎಲ್ಲಾ ವಲಯಗಳಿಗೆ<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠರೂ.60.00 ಲಕ್ಷ)(ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) |
| ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ | ಎಲ್ಲಾ ವಲಯಗಳಿಗೆ<br>ಐಎಸ್‌ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಠ ರೂ.75,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.20,000/–) & 25% ವೆಚ್ಚ (ಗರಿಷ್ಠ ರೂ.50,000/–)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ | ಎಲ್ಲಾ ವಲಯಗಳಿಗೆ<br>ಐಎಸ್‌ಒ ಸರಣಿ ಪ್ರಮಾಣೀಕರಣ ವೆಚ್ಚದ 75%<br>(ಗರಿಷ್ಠ ರೂ.1,00,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.25,000/–) & 25% ವೆಚ್ಚ (ಗರಿಷ್ಠ ರೂ.1,00,0000/—)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ |
| | ಮಹಿಳಾ ಮಾಲಿಕತ್ವದ ವಾಣಿಜ್ಯ ಉದ್ಯಮ(ಡಬ್ಲ್ಯುಬಿಇ) ವೀಕನೆಕ್ಟ್ ಪ್ರಮಾಣೀಕರಣ<br>ಎಲ್ಲಾ ವಲಯಗಳಿಗೆ<br>3 ವರ್ಷಗಳ ಅವಧಿವರೆಗೆ ಗರಿಷ್ಠ ರೂ.75,000/–<br>ಪ್ರಮಾಣಪತ್ರ ಶುಲ್ಕದ 100% ಮೊದಲ ವರ್ಷಕ್ಕೆ –ಗರಿಷ್ಠ ರೂ.30,000/–<br>ಪ್ರಮಾಣಪತ್ರ ಶುಲ್ಕದ 90% ಎರಡನೇ ವರ್ಷಕ್ಕೆ–ಗರಿಷ್ಠ ರೂ.27,000/–<br>ಪ್ರಮಾಣಪತ್ರ ಶುಲ್ಕದ 80% ಮೂರನೇ ವರ್ಷಕ್ಕೆ ಗರಿಷ್ಠ ರೂ 18,000/– | |

**ಕೋಷ್ಟಕ 9.1.3**

| [illegible] | | |
|---|---|---|
| ಯಾವ ರೀತಿಯ ಬೆಂಬಲ | ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ : (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿ ಸೈನಿಕ ಉದ್ಯಮಿಗಳು) |
| ಮಳೆ ನೀರು ಕೊಯ್ಲು | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.2 ಲಕ್ಷ ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.2.50 ಲಕ್ಷ ) |
| ತ್ಯಾಜ್ಯ ನೀರು ಸಂಸ್ಕರಣೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50 ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50 ಲಕ್ಷ ) |
| ನೀರಿನ ಲೆಕ್ಕ ಪರಿಶೋಧನೆ(ಆಡಿಟ್)ಗೆ ತಗುಲಿದ ವೆಚ್ಚ ಮರುಪಾವತಿ | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ<br>(ಒಂದು ಬಾರಿಗೆ) | ಎಲ್ಲಾ ವಲಯಗಳಿಗೆ<br>75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ<br>(ಒಂದು ಬಾರಿಗೆ) |
| ಘನ ತ್ಯಾಜ್ಯ/ ಹೊರಸೂಸುವಿಕೆ | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 50% (ಗರಿಷ್ಠ ರೂ.7.50ಲಕ್ಷ) | ಎಲ್ಲಾ ವಲಯಗಳಿಗೆ<br>ಉಪಕರಣದ ಬೆಲೆಯ 75% (ಗರಿಷ್ಠ ರೂ.8.50ಲಕ್ಷ) |
| ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ಗಳ ಮರುಬಳಕೆ | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.10ಲಕ್ಷ) | ಎಲ್ಲಾ ವಲಯಗಳಿಗೆ<br>ವಿಎಫ್‌ಎನ ಶೇ.5ರಷ್ಟು (ಗರಿಷ್ಠ ರೂ.12ಲಕ್ಷ) |
| ತ್ಯಾಜ್ಯ ಸಂಸ್ಕರಣಾ ಘಟಕ(ಇಟಿಪಿ) ಸ್ಥಾಪನೆಗೆ ಸಹಾಯಧನ | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.50 ರಷ್ಟು (ಗರಿಷ್ಠ ರೂ.50 ಲಕ್ಷ) | ಎಲ್ಲಾ ವಲಯಗಳಿಗೆ<br>ಇಟಿಪಿಯ ವೆಚ್ಚದ ಶೇ.75 ರಷ್ಟು (ಗರಿಷ್ಠ ರೂ.60 ಲಕ್ಷ) |